ಇ) ವ್ಯವಸ್ಥಿತವಾಗಿ ಉಪಕರಣಗಳು ಇಲಾಖೆಗೆ ಒದಗಿಸದಿರುವುದರಿಂದ ಕಾಮಗಾರಿ ಕೆಲಸ ಸ್ಥಗಿತಗೊಳ್ಳುವುದಿಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಯಂತ್ರೋಪಕರಣಗಳ ನ್ಯೂನತೆಯಿಂದ ಇಲಾಖೆ ಕಾಮಗಾರಿಗಳಿಗೆ ಏನೂ ಆಡ್ಡಿ ಆಗಿರುವುದಿಲ್ಲ.

ಧಾರವಾಡ ಜಿಲ್ಲೆಯಲ್ಲಿ 'ಗೃಹ ಕಲಾಣ್ಯ' ಯೋಜನೆ.

೧೫೨೦. ಶ್ರೀ ಸಿ. ಎಂ. ಉದಾಸಿ (ಹಾನಗಲ್),—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ '' ಗೃಹ ಕಲಾಣ '' ಯೋಜನೆಯಲ್ಲಿ ಬಡ ಮಹಿಳೆಯರು ಅವರಿಗೆ ಸಿಗುವ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಿ ಹಾಗೂ ಡಿ ವರ್ಗದ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿರುವುದು.

೧೫೨೬. ಶ್ರೀ ಜಿ. ರಾಜೂ ಗೌಡ (ಹನೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ !

ಅ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸಿ ಹಾಗೂ ಡಿ ವರ್ಗದ ಭೂಮಿಯು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರವಾಗಿದೆ ?

ಆ) ಇದರಲ್ಲಿ ಎಷ್ಟು ಎಕರೆ ಪ್ರದೇಶವು ೧೯೭೮ರ ಹಿಂದೆ ಬಗರ್ ಹುಕುಂ ಸಾಗುವಳಿಗೆ ಒಳಪಟ್ಟಿದೆ ?

ಇ) ಅಂಥಹ ಸಾಗುವಳಿದಾರರನ್ನು ಉಚ್ಚಾಟನೆ ಮಾಡದಿರಲು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸರಕಾರದವರೇನಾದರೂ ಸುತ್ತೋಲೆ ಕಳುಹಿಸಿರುವರೇ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).—

ಅ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ೧೬೮೨ ಹೆಕ್ಟೇರುಗಳಷ್ಟು 'ಸಿ' ವರ್ಗದ ಜಮೀನು ಮತ್ತು ೧೨೧ ಹೆಕ್ಟೇರು 'ಡಿ' ವರ್ಗದ ಭೂಮಿಯನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ.

ಆ) ಮೇಲ್ಕಂಡ 'ಸಿ' ಮತ್ತು 'ಡಿ' ತರಗತಿಯ ಜಮೀನಿನಲ್ಲಿ ಯಾವ ಭಾಗವೂ ಬಗರ್ ಹುಕುಂ ಸಾಗುವಳಿಗೆ ಒಳಪಟ್ಟಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.